388(403) ಶ್ರೀ ಯೋಗೀಶ್ ಭಟ್ ಎನ್.(ಮಂಗಳೂರು): ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು-ಮಹಾನಗರ ಪಾಲಿಕೆಗೆ ಕುಡಿಯುವ ನೀರಿನ ಎ.ಡಿ.ಬಿ. ಯೋಜನೆಯಲ್ಲಿ ಹೊಸ ವೆಂಟೆಡ್ ಡ್ಯಾಂ ನ್ನು ನೇತ್ರಾವತಿ ನದಿಗೆ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ:

ಆ) ಆದೇಶ ಯಾವಾಗ ನೀಡಲಾಗುವುದು:

ಇ) ತಗಲಬಹುದಾದ ವೆಚ್ಚ ಎಷ್ಟು:

ಈ) ಸ್ವಯಂ ಘೋಷಿತ ಆಸ್ತಿ ತೆರಿಗೆಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಬಹುದೇ:

ಉ) ಪ್ರಸ್ತುತ ತೆರಿಗೆಗೆ 2.5ಪಟ್ಟಷ್ಟು ತೆರಿಗೆ ವಿಧಿಸಿರುವ ಆದೇಶ ರದ್ದು ಪಡಿಸಲು ಕ್ರಮ ಕೈಗೊಳ್ಳಬಹುದೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು):

ಅ) ಎ.ಡಿ.ಬಿ. ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನೇತ್ರಾವತಿ ನದಿಗೆ ಹೊಸ ವೆಂಟೆಡ್ ಡ್ಯಾಂ ನ್ನು ನಿರ್ಮಾಣ ಮಾಡುವ ಉದ್ದೇಶವಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

389 (406) Shri.Yogesh Bhat.N. (Mangalore): Will the Chief Minister be pleased to state?

a) What are the steps taken by Government to promote Information Techonology and Biotechnology in DK District;

b) What is the extent of land earmarked for this purpose and where;

c) Which are the infrastructural facilities provided;

d) What are the efforts made to encourage as many companies to invest;

e) What are the probable employment opportunities?

Sri. N. Dharm Shing (Chief Minister):

a) With a view to develop Information Technology in Dakshina Kannada District, Earth station and Incubation Centres have been established and operationalised at Mangalore. The IT and BT companies established in this District are being encouraged by providing necesary infrastructura facilities and extending incentives and concessions as per the IT and Biotechnology Policies announced by the State Government.

b) Barring the Earth Station and Incubation Centre established by STPI in Sy.No.129/A of Derebail, M/s.KEONICS has been asked to reserve the remaining land to the extent of 3.25 acres for establishing the IT Park.

c) The IT Companies have been provided with the necessary infrastructural facilities such as Earth Station, Incubation Centre and required bandwidth for connectivity which are essential for the development of IT sector in Dakshina Kannada District.

d) At present 18 IT companies are functioning in Dakshina Kannada District and efforts are being made to attract more companies especially BPO companies to this place.

e) About 2000 employment has been created in this sector. Efforts are being made to create more employment in BPO sector.

390 (410) ಶ್ರೀ ಯೋಗೀಶ್ ಭಟ್ ಎನ್.(ಮಂಗಳೂರು): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಜಿಲ್ಲಾ ನ್ಯಾಯಾಲಯ ಕಟ್ಟಡಗಳ ಹೊಸ ಸಂಕೀರ್ಣವನ್ನು ಪೂರ್ಣಗೊಳಿಸಲು ಕೈಗೊಂಡ ಕ್ರಮಗಳೇನು;

ಆ) ಇದಕ್ಕೆ ತಗಲುವ ವೆಚ್ಚ ಎಷ್ಟು?

ಇ) ಹಾಗೂ ಇದಕ್ಕೆ ಎಂದು ಅನುಮೋದನೆ ನೀಡಲಾಗಿದೆ?

ಈ) ಮಂಜೂರಾದ ಹಣ ಎಷ್ಟು ಹಾಗೂ ಬಿಡುಗಡೆಯಾದ ಹಣ ವೆಷ್ಟು?

ಉ) ಬಾಕಿಯಿರುವ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅ) ಮಂಗಳೂರಿನ ಜಿಲ್ಲಾ ನ್ಯಾಯಾಲಯ ಕಟ್ಟಡ ಹೊಸ ಸಂಕೀರ್ಣವನ್ನು ನಿರ್ಮಿಸಲು ಸರ್ಕಾರವು 2004–2005ನೇ ಸಾಲಿನಲ್ಲಿ ಮುವತ್ತು ಲಕ್ಷಗಳನ್ನು ಕಾಯ್ದಿರಿಸಿದ್ದು, ಒಟ್ಟಾರೆ ಅಂದಾಜು 135 ಲಕ್ಷ ಎಂದು ನಿಗಧಿ ಪಡಿಸಿರುತ್ತದೆ. ಸದರಿ ಹಣಕ್ಕೆ ಸರಿಹೊಂದುವಂತೆ ಹಂತ ಹಂತವಾಗಿ ಕಟ್ಟಡ ನಿರ್ಮಾಣ ಕೈಗೊಳ್ಳುವ ನಕ್ಷೆ ಮತ್ತು ಅಂದಾಜು ಪತ್ರಿಕೆಗಳನ್ನು ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.

ಆ) ಸುಮಾರು 12 ರಿಂದ 14 ಕೋಟಿ ರೂಪಾಯಿಗಳು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.